ಬಾವಿಗೆ ಕರೆಂಟ್ ತೆಗೆದುಕೊಳ್ಳಬೇಕೆಂದು ಒಂದು ಅರ್ಜಿ ಹಾಕಿದ್ದ, ಅದು ಮಂಜೂರು ಸಹ ಆಗಿತ್ತು. ಗುತ್ತಿಗೆದಾರರು ಬಂದಿದ್ದರಿಂದ ಆ ರೈತರಿಗೆ ಕಂಬ ಹತ್ತಿಸಿ ವೈರ್ ಬಿಗಿಯಲಿಕ್ಕೆ ಹೇಳಿದ, ಆ ಗುತ್ತಿಗೆದಾರ ಕಂಬದ ಮೇಲೆ ಏರಲಿಲ್ಲ, ಲೈನ್‌ಮ್ಯಾನ್‌ಗೆ ಮೇಲೆ ಏರಿಸಲಿಲ್ಲ. ಆ ರೈತನಿಗೆ ಮೇಲೆ ಏರಿಸಿದ್ದರಿಂದ ವೈರ್ ಜೋಡಣೆ ಮಾಡುವಾಗ ಮೈಯಿನ್ ಲೈನ್ ತಗಲಿ ಆ ರೈತ ತೀರಿಕೊಂಡ. ಆ ರೈತನಿಗೆ ಎರಡು ಪುಟ್ಟ ಪುಟ್ಟ ಮಕ್ಕಳಿದ್ದಾರೆ. ಆ ರೈತನಿಗೆ ಸರ್ಕಾರದಿಂದ ಪರಿಹಾರ ಏನಾದರೂ ಕೊಡುತ್ತೀರೇನು?

ಛೇರ್ಮನ್:- ನಿಮ್ಮ ಒಟ್ಟು ಅಭಿಪ್ರಾಯವೇನೆಂದರೆ ಆ ರೈತನಿಗೆ ಪರಿಹಾರ ಕೊಡಬೇಕೆನ್ನುವುದು.

ಶ್ರೀ ಸುಭಾಷ್ ಗುತ್ತೇದಾರ್:- ಮಾನ್ಯ ಅಧ್ಯಕ್ಷರೇ, ಹೌದು. ಗುತ್ತಿಗೆದಾರ ಏನು ಮಾಡಬೇಕಾಗಿತ್ತು ಲೈನ್‌ಮ್ಯಾನ್‌ಗೆ ಕಂಬಕ್ಕೆ ಏರಿಸಿ ವೈರ್ ಜೋಡಣೆ ಮಾಡಿಸಬೇಕಾಗಿತ್ತು. ಅದನ್ನು ಮಾಡಲಿಲ್ಲ. ರೈತನಿಗೆ ಕಂಬಕ್ಕೆ ಏರಿಸಿ ವೈರ್ ಜೋಡಣೆ ಮಾಡಿಸಿದ. ಅದಕ್ಕೆ ಸರ್ಕಾರ ಆ ರೈತನಿಗೆ ಏನಾದರೂ ಪರಿಹಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿದಂತಹ ಪ್ರಶ್ನೆ ಸರಿಯಾಗಿದೆ. ಅದನ್ನು ನಮ್ಮ ಪವರ್ ಮಿನಿಸ್ಟರ್, ಅವರ ಗಮನಕ್ಕೆ ತಂದು ಎಲ್ಲಿ ಲೋಪದೋಷವಾಗಿದೆ. ಅದನ್ನು ಸರಿಪಡಿಸತಕ್ಕಂಥಾದ್ದು ಒಂದು. ಇನ್ನೊಂದು ಪರಿಹಾರ ಕೊಡಿಸತಕ್ಕಂಥಾದ್ದರ ಬಗ್ಗೆ ಕೂಡ ಅವರಿಗೆ ನಾನು ಸಲಹೆ ಮಾಡುತ್ತೇನೆ.

ಛೇರ್ಮನ್:- ಲೀಗಲ್ ಇದ್ದರೆ ಮಾನ್ಯ ಅವರು ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಎ. ರಾಮದಾಸ್‌ರವರು ಇಲ್ಲ. ಅವರ ವಿಚಾರ ನಾಳೆ ತೆಗೆದುಕೊಳ್ಳೋಣ. ಈಗ ಗಮನ ಸೆಳೆಯುವ ಸೂಚನೆ ಶ್ರೀ ಎಂ.ಎಸ್. ಆತ್ಮಾನಂದ.

11) ಗಮನ ಸೆಳೆಯುವ ಸೂಚನೆ

ಅ) ಮಂಡ್ಯ ಜಿಲ್ಲೆಯಲ್ಲಿನ ವಿಶ್ವೇಶ್ವರಯ್ಯ ನಾಲೆಯ ವ್ಯಾಪ್ತಿಯಲ್ಲಿ ಏತನೀರಾವರಿ ಕಾಮಗಾರಿಯನ್ನು ಸಂಪೂರ್ಣಗೊಳಿಸದೇ ಇರತಕ್ಕಂಥ ಹಿನ್ನೆಲೆಯಲ್ಲಿ ರೈತರಿಗೆ ಬೆಳೆ ಮತ್ತು ಆರ್ಥಿಕ ನಷ್ಟ ಉಂಟಾಗುತ್ತಿರುವುದರ ಬಗ್ಗೆ -

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿನ ವಿಶ್ವೇಶ್ವರಯ್ಯ ನಾಲೆಯ ವ್ಯಾಪ್ತಿಯಲ್ಲಿ ಏತ ನೀರಾವರಿ ಕಾಮಗಾರಿಯನ್ನು ಸಂಪೂರ್ಣಗೊಳಿಸದೇ ಇರತಕ್ಕಂಥ ಹಿನ್ನೆಲೆಯಲ್ಲಿ ರೈತರಿಗೆ ಬೆಳೆ ಮತ್ತು ಆರ್ಥಿಕ ನಷ್ಟ ಉಂಟಾಗುತ್ತಿರುವ ಬಗ್ಗೆ ನಾನು ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ನಾಲೆಯಿಂದ ಲಿಫ್ಟ್ ಇರಿಗೇಶನ್ ಮಾಡಿಕೊಳ್ಳಬೇಕೆಂದು ಹಾಕಿದ ಪ್ರಶ್ನೆ. ಅದು ಸಣ್ಣ ನೀರಾವರಿಗೆ ಎಲ್ಲಿ ಬರುತ್ತದೆ? ಬರುವುದಿಲ್ಲ. ಅವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾಗ ಆ ಮುಖಾಂತರ ಮಾಡಿಸಿಕೊಂಡು ಒಂದು 340 ಎಕರೆಗೆ ಮತ್ತೊಂದು 240 ಎಕರೆಗೆ ಅನುಕೂಲ ಮಾಡಿಕೊಡಬೇಕೆಂದು ಮಾಡಿಕೊಂಡಿದ್ದಾರೆ. ಅದು ಖಂಡಿತವಾಗಿ ನಮ್ಮ

ಇಲಾಖೆಗೆ ಬರುವುದಿಲ್ಲ. ಅದು ನೀರಾವರಿ ಇಲಾಖೆಗೆ ಹೋಗುತ್ತದೆ. ದಯವಿಟ್ಟು ಈ ಪ್ರಶ್ನೆಯನ್ನು ಅವರಿಗೆ ಹಾಕಿದರೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೇ ನಾನು ತಮಗೆ ವಿಚಾರ ತಿಳಿಸಲಿಕ್ಕೆ ಬಯಸುತ್ತೇನೆ. ನಾನು ಹಾಕಿರತಕ್ಕಂಥಾದ್ದು ಹುಣಕನಹಳ್ಳಿ ಮತ್ತು ಹೇಮಗಿ ಏತ ನೀರಾವರಿ ಯೋಜನೆಗೆ ಸಂಬಂಧಪಟ್ಟ ಪ್ರಶ್ನೆ ಸಣ್ಣ ನೀರಾವರಿ ಇಲಾಖೆ ಮತಿಯಿಂದ ಅದು ಮಂಜೂರಾಗಿ ಆ ಕಾಮಗಾರಿಯನ್ನು ಸಹ ಸಣ್ಣ ನೀರಾವರಿ ಇಲಾಖೆ ಅದನ್ನು ಅನುಷ್ಠಾನಗೊಳಿಸುತ್ತಿದೆ. ಈ ಏತನೀರಾವರಿ ಕಾಮಗಾರಿ ಪ್ರಾರಂಭವಾಗಿ ಸುಮಾರು 9-10 ವರ್ಷಗಳಾಯಿತು. ಇನ್ನೂ ಕೂಡ ಸಂಪೂರ್ಣವಾಗಿಲ್ಲ. ನನ್ನ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಪ್ರಾರಂಭವಾಗಿರುವ ಹುಳಕನಹಳ್ಳಿ ಮತ್ತು ಹೇಮಗಿ ಈ ಎರಡು ಏತನೀರಾವರಿಗೆ ಸಂಬಂಧಪಟ್ಟ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು.

ಛೇರ್ಮನ್:- ತಾವು ಸಂಬಂಧಪಟ್ಟ ಮಂತ್ರಿಗಳ ಕೊಠಡಿಗೆ ಹೋಗಿ ಕುಳಿತು ಮಾತನಾಡಿದರೆ ಪರಿಹಾರ ಕಂಡುಕೊಳ್ಳಬಹುದು. ಇದು ದೊಡ್ಡ ಸಮಸ್ಯೆ ಏನೂ ಅಲ್ಲ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ತಾವೇನು ರೂಲಿಂಗ್ ಕೊಟ್ಟಿರಿ ಅದು ಅತ್ಯಂತ ಸಮರ್ಪಕವಾಗಿದೆ.

ಛೇರ್ಮನ್:- ತಾವು ದಯವಿಟ್ಟು ಅವರ ಕೊಠಡಿಗೆ ಹೋಗಿ. ಆ ಮಂತ್ರಿಯವರು ಸರ್ಜರಿ ಮಾಡುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ:- ತಾವು ಹೀಗೆ ಹೇಳಿದರೆ ಹೇಗೆ? ನಾನು ರೈತರ ಪರವಾಗಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಎಲ್ಲಾ ವಿಚಾರಗಳನ್ನು ಮಂತ್ರಿಗಳ ಕೊಠಡಿಯಲ್ಲಿ ಪ್ರಸ್ತಾಪ ಮಾಡಲಿಕ್ಕಾಗುವುದಿಲ್ಲ. ಈ ವಿಷಯ ಬಹಳ ಗಂಭೀರವಾಗಿರುವುದರಿಂದ ನಾನು ಕಳೆದ 10 ವರ್ಷಗಳಿಂದ ಇದರ ಪೂರ್ಣ ಅನುಷ್ಠಾನಕ್ಕೋಸ್ಕರ ಪ್ರಯತ್ನ ಪಡುತ್ತಿದ್ದೇನೆ. ಈಗ ತಾವು ಆದೇಶ ನೀಡಿದರೆ ತಮ್ಮ ಆದೇಶವನ್ನು ನಾನು ಪಾಲಿಸುತ್ತೇನೆ.

ಛೇರ್ಮನ್:- ತಾವು ಏನೇ ಹೇಳಿದರೂ ಚರ್ಚೆ ಮೂಲಕವೇ ತಾನೇ ನಾವು ತೀರ್ಮಾನ ತೆಗೆದುಕೊಳ್ಳಬೇಕು. Afterall, democracy is for discussion, of discussion and by discussion.

ಶ್ರೀ ಎಂ.ಎಸ್. ಆತ್ಮಾನಂದ:- ನಾಳೆ ಹಾಕಿ.

ಆ) ರಾಜ್ಯದಲ್ಲಿ "ಸೂಪರ್ ಲೋಟೋ" ಲಾಟರಿ ನಡೆಸುತ್ತಿರುವುದರಿಂದ ಲಕ್ಷಾಂತರ ಜನರು ಭಾಗಿಯಾಗಿ, ಆರ್ಥಿಕ ತೊಂದರೆ ಅನುಭವಿಸುತ್ತಿರುವ ಬಗ್ಗೆ.

ಛೇರ್ಮನ್:- ಶ್ರೀಯುತರುಗಳಾದ ಕೆ. ಜಯಪ್ರಕಾಶ್ ಹೆಗಡೆ, ಕೆ.ಬಿ. ಮಲ್ಲಿಕಾರ್ಜುನ ಹಂಪನಗೌಡ ಬಾದರ್ಲಿ, ಮಹಂತೇಶ್ ಎಸ್. ಕೌಜಲಗಿ, ಅಮರೇಗೌಡ ಹಾಗೂ ಇತರರು ಕರ್ನಾಟಕ ರಾಜ್ಯದಲ್ಲಿ ಸೂಪರ್ ಲೋಟೋ ಲಾಟರಿ ಬಗ್ಗೆ ಕಳುಹಿಸಿದ್ದೀರಿ. ಈ ಬಗ್ಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ತಾವು ಎಡಗಡೆ ನೋಡಿಕೊಂಡು ಹೇಳಿದರೆ ಬಹಳ ಒಳ್ಳೆಯದು. ತಾವು ಸಾರ್ವಜನಿಕರ ಗಮನ ಸೆಳೆಯುತ್ತಿದ್ದೀರಿ. ಆ ಗಮನ ಸೆಳೆಯುವುದಕ್ಕೆ ಜನ ಇಲ್ಲ ಆದ್ದರಿಂದ.....